ಸಂದರ್ಶನ

# ಹಿಂದಿ ದತ್ತಣ್ಣ

**ದತ್ತಣ್ಣ ಉರುಫ್ ಎಚ್.ಜಿ. ದತ್ತಾತ್ರೇಯ ಈಗೀಗ ಮನೆಯ ಲ್ಯಾಂಡ್‌ಲೈನ್ ರಿಂಗಾದರೆ (ಅವರ ಮೊಬೈಲ್ ನಂಬರ್ ಯಾರ ಬಳಿಯೂ ಇರಲಿಕ್ಕಿಲ್ಲ!) ತಮ್ಮದೇ ಶೈಲಿಯಲ್ಲೊಮ್ಮೆ ತಲೆ ಮೇಲೆ ಕೈಯಾಡಿಸುತ್ತಾರೆ. 'ಮಿಷನ್ ಮಂಗಲ್' ಎಂಬ ಪದಗಳು ಕಿವಿಮೇಲೆ ಬೀಳುತ್ತಿದ್ದಂತೆ ಅವರಿಗೆ ಮುಜುಗರ. 'ಇಷ್ಟು ವರ್ಷ ಇಲ್ಲದ್ದು ಈಗ ಇರೋ ಬರೋರಿಗೆಲ್ಲ ಏನು ಇಂಟರ್‌ವ್ಯೂ ಕೊಡೋದು' ಅಂತ ಅವರ ಆಪ್ತೇಷ್ಟರಲ್ಲೇ ಕೆಲವರು ಕಾಲೆಳೆದಿರುವುದೂ ಇದಕ್ಕೆ ಕಾರಣವಿದ್ದಿರಬಹುದು. ಆದರೆ, ದತ್ತಣ್ಣ ಈಗ ಸಕಾರಣವಾಗಿ ಸುದ್ದಿಯಲ್ಲಿದ್ದಾರೆ. ಅವರು 'ಮಿಷನ್ ಮಂಗಲ್' ಹಿಂದಿ ಸಿನಿಮಾದಲ್ಲಿ ಅಭಿನಯಿಸಿರುವುದು ಸದ್ದು ಮಾಡುತ್ತಿದೆ. ಈ ಸದ್ದನ್ನು ತಗ್ಗಿಸುತ್ತಲೇ ಅವರು 'ಸುಧಾ' ಜೊತೆ ಮಾತಿಗಿಳಿದರು.**

■ ಸಂದರ್ಶನ: **ವಿಶಾಖ ಎನ್.**

**◆ 'ಮಿಷನ್ ಮಂಗಲ್' ಅವಕಾಶ ಸಿಕ್ಕಿದ್ದು ಹೇಗೆ?**

ಅದರ ನಿರ್ದೇಶಕ ಜಗನ್ ಶಕ್ತಿ ಅವರಿಗೆ ನಾನು ಯಾರು ಅಂತ ಗೊತ್ತಿತ್ತು. ಹಿಂದೆ 'ದೂಸ್ರಾ' ಎಂಬ ಒಂದು ಹಿಂದಿ ಸಿನಿಮಾದಲ್ಲಿ ನಟಿಸಿದ್ದೆ. ಆದರೆ, ಯಾಕೋ ಅದು ತೆರೆ ಕಾಣಲೇ ಇಲ್ಲ. ಆಗ ಈ ನಿರ್ದೇಶಕ ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದರು. ಈಗ ಬಹುಶಃ ನಾನು ಅವರಿಗೆ ನೆನಪಾಗಿರಬೇಕು.

**◆ ಇಲ್ಲಿನ ಚಿತ್ರೀಕರಣದ ವಿಧಾನಕ್ಕೂ ಅಲ್ಲಿನದಕ್ಕೂ ಏನು ವ್ಯತ್ಯಾಸ?**

ಅಲ್ಲಿ ಆತಿಥ್ಯ ಚೆನ್ನಾಗಿರುತ್ತದೆ. ಸೆಟ್ ನಿರ್ವಹಣೆ, ಅಭಿನಯ, ನಿರ್ದೇಶನದಲ್ಲಿ ಎಲ್ಲೂ ರಾಜಿ ಆಗುವುದಿಲ್ಲ. ಅದಕ್ಕೆ ಬಜೆಟ್ ದೊಡ್ಡದಾಗಿರುವುದೂ ಕಾರಣವಿರಬಹುದು. ಉಳಿದಂತೆ ಹೆಚ್ಚೇನೂ ವ್ಯತ್ಯಾಸವಿಲ್ಲ.

**◆ ರಾಜಿ ಆಗುವುದಿಲ್ಲ ಎಂದಿರಲ್ಲ. ಅದನ್ನು ಸ್ವಲ್ಪ ಬಿಡಿಸಿ ಹೇಳಿ.**

ನಮ್ಮಲ್ಲಿ ಎಷ್ಟೋ ಸಲ ಚಿತ್ರೀಕರಣದ ವಿಷಯದಲ್ಲಿ ಬಜೆಟ್ ಕಾರಣಕ್ಕೆ ರಾಜಿ ಆಗುತ್ತಿರುತ್ತೇವೆ. ಉದಾಹರಣೆಗೆ, ಆ ಸಿನಿಮಾದಲ್ಲಿ ನಾನು, ನನ್ನ ಹೆಂಡತಿ ಬೆಂಗಳೂರಿನಿಂದ ತಿರುಪತಿಗೆ ಹೊರಡುವ ದೃಶ್ಯವಿದೆ. ಇಬ್ಬರೂ ಹೊರಟಿರುತ್ತೇವೆ. ಅಷ್ಟರಲ್ಲಿ ನನಗೆ ಕರೆ ಬರುವುದರಿಂದ ನಾನು ಹೆಂಡತಿಯನ್ನು ಬಸ್‌ಗೆ ಹತ್ತಿಸಿ ಹೋಗುವ ಸನ್ನಿವೇಶ. ಒಂದು ತಾಸಿನ ಚಿತ್ರೀಕರಣ. ಅದನ್ನು ಬೇರೆ ಎಲ್ಲಿಯಾದರೂ ಚಿತ್ರೀಕರಿಸಬಹುದಾಗಿತ್ತು. ಆದರೆ, ಅವರು ಆನಂದ್‌ರಾವ್ ಸರ್ಕಲ್‌ನ ವಿಆರ್‌ಎಲ್ ಬಸ್ ಟರ್ಮಿನಲ್ ಬಳಿ ಚಿತ್ರೀಕರಿಸಿದರು. ಬೆಂಗಳೂರಿನ ಸಹಜ ಪರಿಸರದಲ್ಲೇ ಸಣ್ಣ ದೃಶ್ಯವನ್ನೂ ಚಿತ್ರೀಕರಿಸಿದ್ದು ನನಗೆ ವಿಶೇಷ ಅನ್ನಿಸಿತ್ತು.

ಇಸ್ರೋದ ಕಂಟ್ರೋಲ್ ರೂಮ್‌ನ ಸೆಟ್ ಅಂತೂ ಸಿನಿಮಾದಲ್ಲಿ ತದ್ವಾತ್ತಾಗಿದೆ. ಯಾವ ಸಣ್ಣ ಉಪಕರಣ ಕೂಡ ಮಿಸ್ ಆದಂತಿಲ್ಲ.

**◆ ಬಾಲಿವುಡ್ ಈಗೀಗ ದಕ್ಷಿಣದ ನಟರತ್ತ ಕಣ್ಣು ಬೀರುತ್ತಿದೆ. ಕನ್ನಡದ ಗಿರೀಶ ಕಾರ್ನಾಡರು ಬಹಳ ಹಿಂದೆಯೇ ಅಲ್ಲಿ ನಟಿಸುತ್ತಿದ್ದರು. ಕಳೆದ ಕೆಲವು ವರ್ಷಗಳಲ್ಲಿ ಪ್ರಕಾಶ್ ಬೆಳವಾಡಿ ಕೆಲವು ಸಿನಿಮಾಗಳಲ್ಲಿ ಅಭಿನಯಿಸಿದರು. ಈಗ ನಿಮ್ಮ ಸರದಿ. ಇದಕ್ಕೆ ಮಾರುಕಟ್ಟೆ ಕಾರಣವೋ ಬೇರೆ ಇನ್ನೇನಾದರೂ ಇದೆಯೋ?**

ಈ ಸಿನಿಮಾದಲ್ಲಿ ಇಸ್ರೋ ಕೇಂದ್ರಬಿಂದು. ಅದು ಇ ರು ವು ದು

